**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ43/2022**

**ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **23.06.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ.**ಎಂ.ಎಚ್.ಎಸ್** ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು 21 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1 ರಿಂದ ನಿಪಿ-21** ಎಂದು, ಒಂದು ಮುಟೇಶನ್ ಪ್ರತಿಯನ್ನು **ನಿಪಿ-22** ಎಂದು, ಆಸ್ತಿ ತೆರಿಗೆ ಪಾವತಿ ರಸೀದಿಯನ್ನು **ನಿಪಿ-23** ಎಂದು, ಋಣಭಾರರಾಹಿತ್ಯ ಪತ್ರವನ್ನು **ನಿಪಿ-24** ಎಂದು, ಎರಡು ಆಕಾರಬಂದ್ ಗಳನ್ನು **ನಿಪಿ-25 ಮತ್ತು ನಿಪಿ-26** ಎಂದು, ಆರ್.ಆರ್ ಪಕ್ಕಾ ಪುಸ್ತಕದ ದೃಡೀಕೃತ ನಕಲನ್ನು **ನಿಪಿ-27** ಎಂದು, ತಿ.ನರಸೀಪುರ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿಯನ್ನು **ನಿಪಿ-28** ಎಂದು, ತಹಶೀಲ್ದಾರರು ಪೊಲೀಸ್ ನಿರೀಕ್ಷಕರಿಗೆ ನೀಡಿದ ಎರಡು ಪತ್ರಗಳನ್ನು **ನಿಪಿ-29 ಮತ್ತು ನಿಪಿ-30** ಎಂದು, ಮೈಸೂರು ಜಿಲ್ಲಾಧಿಕಾರಿಯವರಿಗೆ ನೀಡಿರುವ ಮನವಿ ಪತ್ರದ ಕಚೇರಿ ಪ್ರತಿಯನ್ನು **ನಿಪಿ-31** ಎಂದು, ತಹಶೀಲ್ದಾರವರು ನೀಡಿರುವ ಹಿಂಬರಹವನ್ನು **ನಿಪಿ-32** ಎಂದು, ತಹಶೀಲ್ದಾರರವರಿಗೆ ನೀಡಿರುವ ಮನವಿ ಪತ್ರದ ಕಚೇರಿ ಪ್ರತಿಯನ್ನು **ನಿಪಿ-33** ಎಂದು, ತಿ.ನರಸೀಪುರ ಪೊಲೀಸ್ ಠಾಣೆಗೆ ನೀಡಿರುವ ದೂರಿನ ಕಚೇರಿ ಪ್ರತಿಯನ್ನು **ನಿಪಿ-34** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗಾಗಿ** ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**